20.	ಕೋಲಾರ		
21.	ಕೊಪ್ಪಳ		
22.	ಮಂಡ್ಯ	250	6250
23.	ಮೈಸೂರು	8780	1,62,946
24.	ರಾಯಚೂರು		
25.	ರಾಮನಗರ	48	960
26.	ಶಿವಮೊಗ್ಗ	13	325
27.	ತುಮಕೂರು		
28.	ಉಡುಪಿ		
29.	ಉತ್ತರ ಕನ್ನಡ	200	3000
30.	ಯಾದಗಿರಿ		
	ಒಟ್ಟು	31,019	6,20,390

ಸಕ್ಕರೆ ಕಾರ್ಖಾನೆಯಲ್ಲಿ ಅವ್ಯವಹಾರ

276 (286) ಶೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ತಿಳಿಸುವರೇ:–

(ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಎಂ.ಕೆ. ಹುಬ್ಬಳ್ಳಿ, ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಅವ್ಯವಹಾರವಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ಬಂದಿದ್ದಲ್ಲಿ, ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಸ್.ಎ. ರವೀಂದ್ರನಾಥ (ಸಕ್ಕರೆ ಮತ್ತು ತೋಟಗಾರಿಕೆ ಸಚಿವರು):

(ಅ) ಹೌದು

(ಆ) ಶ್ರೀ ಮಲ್ಲಪ್ರಭಾ ಸಹಕಾರಿ ಕಾರ್ಖಾನೆ ನಿ. ಎಂ.ಕೆ. ಹುಬ್ಬಳ್ಳಿ, ಬೆಳಗಾವಿ ಜಿಲ್ಲೆ. ಈ ಕಾರ್ಖಾನೆಯಲ್ಲಿ ನಡೆದಿದೆ. ಎನ್ನಲಾದ ಕಾನೂನುಬಾಹಿರ ಕ್ರಮಗಳು, ಅವ್ಯವಹಾರಗಳು ಮತ್ತು ಕಾರ್ಖಾನೆ ಹಿತದೃಷ್ಟಿಗೆ ವಿರುದ್ಧವಾಗಿ ಕ್ರಮ ಕೈಗೊಂಡು ಆರ್ಥಿಕ

ನಷ್ಟ ಉಂಟು ಮಾಡಿರುವುದರ ಬಗ್ಗೆ ಮಾಡಲಾಗಿರುವ 13 ಆರೋಪಗಳ ಸತ್ಯಾಸತ್ಯತೆಗಳನ್ನು ತಿಳಿಯಲು ಕಾರ್ಖಾನೆಯ ಲೆಕ್ಕ ಪತ್ರಗಳು, ದಾಖಲಾತಿಗಳು ಹಾಗೂ ಸಾಕ್ಷಾಧಾರಗಳೊಂದಿಗೆ ಪರಿಶೀಲಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64(1)ರನ್ವಯ ವಿಚಾರಣೆ ನಡೆಸಲು ಶ್ರೀ ಹೆಚ್.ಎಂ. ವೀರಭದ್ರಸ್ವಾಮಿ, ವ್ಯವಸ್ಥಾಪಕ ನಿರ್ದೇಶಕರು, ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೃಷ್ಣಾನಗರ, ಬಿಜಾಪುರ ಜಿಲ್ಲೆ, ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಅಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಆದೇಶ ಸಂಖ್ಯೆ: ಡಿಎಸ್‌ಕೆ/ಇಎಸ್‌ಟಿಎಸ್/49/2009–10 ದಿನಾಂಕ: 3–4–2010ರ ಮೂಲಕ ನೇಮಿಸಿ, ವಿಚಾರಣೆಯನ್ನು 90 ದಿನಗಳೊಳಗೆ ಪೂರ್ಣಗೊಳಿಸಿ ವರದಿ ಸಲ್ಲಿಸಲು ಸೂಚಿಸಿದ್ದರು.

ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪೂರ್ಣಗೊಳಿಸಲು ಕಾಲಕಾಲಕ್ಕೆ ಕಾಲಾವಕಾಶವನ್ನು ವಿಸ್ತರಿಸಲು ಕೋರಿದ್ದರ ಮೇರೆಗೆ ವಿಚಾರಣಾ ಅವಧಿಯನ್ನು ಅಂತಿಮವಾಗಿ ದಿನಾಂಕ: 2–10–2011ರ ವರೆಗೆ ವಿಸ್ತರಿಸಲಾಗಿರುತ್ತದೆ. ವಿಸ್ತೃತ ಅವಧಿಯೊಳಗೆ ವಿಚಾರಣೆ ಪೂರ್ಣಗೊಳಿಸಿ ವರದಿ ಸಲ್ಲಿಸಲು ದಿನಾಂಕ: 24–6–2011ರ ಪತ್ರದಲ್ಲಿ ಆದೇಶಿಸಲಾಗಿತ್ತು.

ಆದರೆ ಈ ವಿಚಾರಣೆಗೆ ಸಂಬಂಧಿಸದಂತೆ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಎರಡು ರಿಟ್ ಅರ್ಜಿಗಳು ರಿಟ್ ಅರ್ಜಿ ಸಂಖ್ಯೆ: 67173–76/2010 ಮತ್ತು 68969–74/2011 ಹಾಗೂ ರಿಟ್ ಅಪೀಲು ಸಂಖ್ಯೆ: 6079–88/2011ರ ಪ್ರಕರಣಗಳಲ್ಲಿ ನ್ಯಾಯಾಲಯವು ನೀಡಿದ ಆದೇಶಗಳನ್ನು ಪಾಲಿಸುವಲ್ಲಿ ದಿನಾಂಕ: 9–12–2010 ರಿಂದ 13–9–2011ರ ವರೆಗೆ ವಿಚಾರಣಾ ಪ್ರಕ್ರಿಯೆಯು ಸ್ಥಗಿತಗೊಂಡಿತ್ತು. ಇವುಗಳನ್ನು ಪರಿಗಣಿಸಿ ಪುನಃ ನಾಲ್ಕು ತಿಂಗಳ ಅಂದರೆ ದಿನಾಂಕ: 3–10–2011 ರಿಂದ ದಿನಾಂಕ: 2–2–2012ರ ವರೆಗೆ ಕಾಲಾವಕಾಶವನ್ನು ವಿಸ್ತರಿಸಬೇಕೆಂದು ವಿಚಾರಣಾಧಿಕಾರಿಗಳು ಪತ್ರ ಬರೆದು ಕೋರಿದ್ದು. ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959ರ ಕಲಂ 64(2)(ಎ) ರೀತ್ಯಾ ದತ್ತವಾದ ಅಧಿಕಾರದಂತೆ ವಿಚಾರಣಾ ಅವಧಿಯನ್ನು ದಿನಾಂಕ: 3–10–2011ರಿಂದ ದಿನಾಂಕ: 2–2–2012ರ ವರೆಗೆ ವಿಸ್ತರಿಸುವ ವಿಷಯ ಸಹಕಾರ ಇಲಾಖೆಯ ಪರಿಶೀಲನೆಯಲ್ಲಿದೆ.